ಶ್ರೀ ಆರ್.ಬಿ.ತಿಮ್ಮಾಪುರ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಮಾರುಕಟ್ಟೆ ಪ್ರಾಂಗಣದ ಹೊಸ ವಿಸ್ತರಣೆ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ. ಧಾರವಾಡ, ಸವದತ್ತಿ ಮುಖ್ಯ ರಸ್ತೆಯಿಂದ ಹೊಸ ಪ್ರಾಂಗಣಕ್ಕೆ ವಾಹನ ಸಂಚಾರಕ್ಕಾಗಿ ಸಂಪರ್ಕ ಕಲ್ಪಿಸಲು ಇಕ್ಕಟ್ಟಾದ ರಸ್ತೆ ಇದೆ. ವಾಹನ ಸಂಚಾರ ವ್ಯವಸ್ಥೆಗೆ ಅಡಚಣೆ ಇರುವುದರಿಂದ ವ್ಯಾಪಾರ ವಹಿವಾಟು ಹೊಸ ಪ್ರಾಂಗಣಕ್ಕೆ ಸ್ಥಳಾಂತರಿಸುವಲ್ಲಿ ವಿಳಂಬವಾಗುತ್ತಿದೆ. ಸಂಪರ್ಕ ರಸ್ತೆ ವಿಸ್ತರಣೆಗೆ ಅಗತ್ಯವಿರುವ ಜಮೀನನ್ನು ಭೂಸ್ವಾಧೀನದ ಮೂಲಕ ಪಡೆಯಲು ಉದ್ದೇಶಿಸಲಾಗಿದೆ.

ಆ) ಹಮಾಲರ ವಸತಿ ಯೋಜನೆಯ ಪ್ರಥಮ ಹಂತದಲ್ಲಿ ರಾಜ್ಯದಲ್ಲಿ 21 ಮಾರುಕಟ್ಟೆ ಸಮಿತಿಗಳನ್ನು ಗುರುತಿಸಲಾಗಿದೆ. ಇದರಲ್ಲಿ ಧಾರವಾಡ ಮಾರುಕಟ್ಟೆ ಸಮಿತಿ ಸೇರಿರುವುದಿಲ್ಲ.

ಇ) ಆಶ್ರಯ ಹಾಗೂ ಅಂಬೇಡ್ಕರ್ ಯೋಜನೆಗಳ ಅಡಿಯಲ್ಲಿ ಸರ್ಕಾರ ರಚಿಸಿರುವ ವಸತಿ ಸಮಿತಿಗಳು ವಸತಿ ಗೃಹಗಳನ್ನು ಮಂಜೂರು ಮಾಡುವಾಗ ಮಾರುಕಟ್ಟೆ ಸಮಿತಿಗಳಲ್ಲಿ ಲೈಸನ್ಸ್ ಪಡೆದ ಹಮಾಲರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಆದ್ಯತೆ ಮೇರೆಗೆ ಹಾಗೂ ಇತರೆ ಹಮಾಲರಿಗೂ ಮಂಜೂರು ಮಾಡಲು ಸದರಿ ವಸತಿ ಸಮಿತಿಗಳನ್ನು ವಿನಂತಿಸಲು ಮಾರುಕಟ್ಟೆ ಸಮಿತಿಗಳಿಗೆ ಸೂಚನೆ ನೀಡಲಾಗಿದೆ.

ಟಿ.ನರಸೀಪುರ ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯಡಿ ನಿವೇಶನಗಳ ಹಂಚಿಕೆ.

2484(ಎಲ್ಜೆಡ್)

ಡಾ: ಭಾರತಿ ಶಂಕರ್(ಟಿ.ನರಸೀಪುರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಟಿ.ನರಸೀಪುರ ವಿಧಾನಸಭಾ ಕ್ಷೇತ್ರ ಅನೇಕ ಗ್ರಾಮಗಳಲ್ಲಿ ಆಶ್ರಯ ನಿವೇಶನ ಹಂಚಿಕೆಗಾಗಿ ಭೂಸ್ವಾಧೀನಕ್ಕೆ ಅರ್ಜಿಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ. ಹಾಗಿದ್ದಲ್ಲಿ ಯಾವ ಯಾವ ಗ್ರಾಮಗಳಲ್ಲಿ ಪ್ರಸ್ತಾವನೆ ಬಂದಿವೆ?

ಇ. ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು):

ಅ. ಹೌದು.

ಆ. ೧. ಟಿ.ನರಸೀಪುರ ತಾಲ್ಲೂಕು, ಹೊಸಕೋಟೆ ಗ್ರಾಮ.

೨. ನಂಜನಗೂಡು ತಾಲ್ಲೂಕು ತಗಡೂರು ಗ್ರಾಮ

ಇ. ಈ ಬಗ್ಗೆ ಶೀಘ್ರದಲ್ಲಿ ಕ್ರಮ ಕೈಗೊಳ್ಳಲಾಗುವುದು.

ವಸತಿ ಸಮಿತಿ ರಚನೆ ಬಗ್ಗೆ.

2485(2859)

ಡಾ: ಭಾರತೀ ಶಂಕರ್(ಟಿ.ನರಸೀಪುರ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ವಸತಿ ಸಮಿತಿಗಳನ್ನು ಯಾವಾಗ ರಚಿಸಲಾಗುವುದು?

ಆ. ಸಮಿತಿಗಳನ್ನು ರಚಿಸುವಾಗ ಸರ್ಕಾರ ಅನುಸರಿಸುವ ವಿಧಿ ವಿಧಾನಗಳೇನು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು):

ಅ. ಈಗಾಗಲೇ ಆಶ್ರಯ ಸಮಿತಿಗಳಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸುತ್ತಿರುವ ಕಾರ್ಯ ಪ್ರಗತಿಯಲ್ಲಿರುತ್ತದೆ.

ಆ. ಈ ಸಮಿತಿಗಳನ್ನು ವಿಧಾನಸಭಾ ಕ್ಷೇತ್ರವಾರು ರಚಿಸಲಾಗುತ್ತಿದೆ. ಈ ಸಮಿತಿಗೆ ಸಂಬಂಧಪಟ್ಟ ಕ್ಷೇತ್ರ ಶಾಸಕರು ಅಧ್ಯಕ್ಷರಾಗಿರುತ್ತಾರೆ. ಸಮಿತಿಯಲ್ಲಿ ಅಧಿಕಾರೇತರ ಸದಸ್ಯರು ಹಾಗೂ ಸದಸ್ಯರುಗಳ ಪೈಕಿ ಅಧಿಕಾರಿ ಸದಸ್ಯರುಗಳು ಸಹಾ ಇರುತ್ತಾದೆ.

ಟಿ.ನರಸೀಪುರ ಕ್ಷೇತ್ರದಲ್ಲಿ ಸ್ಮಶಾನಗಳ ಬಗೆಗೆ.

2486(2860)

ಡಾ: ಭಾರತಿ ಶಂಕರ್ (ಟಿ.ನರಸೀಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?